ॐ

वेदान्तभारतीग्रन्थमाला प्रथमपुष्पम्

ವೇದಾಂತಭಾರತೀ ಗ್ರಂಥಮಾಲಾ–ಪ್ರಥಮಪುಷ್ಪಮ್

श्रीशङ्करभगवत्पादप्रणीतः

# विवेकचूडामणिः

ಶ್ರೀ ಶಂಕರಭಗವತ್ಪಾದವಿರಚಿತ

# ವಿವೇಕಚೂಡಾಮಣಿ

संस्कृतव्याख्यातारः

**शृङ्गेरिजगद्गुरु श्रीश्री चन्द्रशेखरभारती महास्वामिनः**

ಸಂಸ್ಕೃತ ವ್ಯಾಖ್ಯಾನ : **ಶೃಂಗೇರಿ ಜಗದ್ಗುರು ಶ್ರೀಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು**

कन्नडभाषान्तरकर्तारः

**पण्डितप्रवरेत्यादिबिरुदभाजः श्री के. कृष्णजोयिस् महाभागाः**

ಕನ್ನಡ ಭಾಷಾಂತರ : **ಪಂಡಿತಪ್ರವರ ಶ್ರೀ ಕೆ. ಕೃಷ್ಣಜೋಯಿಸರು**

**ವೇದಾಂತಭಾರತೀ**

(ತುಮಕೂರು ವಿಶ್ವವಿದ್ಯಾನಿಲಯದಿಂದ ಮಾನಿತ ಸಂಶೋಧನ ಸಂಸ್ಥೆ)

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ – 571 602

ಮೈಸೂರು ಜಿಲ್ಲೆ ದೂ: 08223–262471

**Viveka Chudamani** -of Sri Shankaracharya with Sanskrit Vyakhyana by Sringeri Jagadguru Sri Sri Chandrashekhara Bharati Mahaswamiji and Kannada Translation by Panditapravara Sri K. Krishna Jois.

FIRST PRINT : 2000
COPIES : 1000

SECOND PRINT : 2007
COPIES : 1000

THIRD PRINT : 2021
COPIES : 1000

© : *Vedanta Bharati*

ISBN 978-81-927915-0-0

PAGES : XII+528

PRICE : ₹. 500.00

**PUBLISHED BY :**

**Vedanta Bharati**
(Recognized as Research Centre by Tumkur University)
Chandramouli Road, Krishnarajanagara - 571 602,
Mysore District. ✆ : 08223-264371, 262471

PRINTED AT :
Span Print, Banashankari, Bangalore-70



शृङ्गेरिजगद्गुरु श्रीश्री चन्द्रशेखरभारती महास्वामिनः

# प्रास्ताविकम्

लोकान् अविद्यान्धतमसात् उद्धर्तुमेव कृतावतारो भगवान् वासुदेवः प्रपन्नायार्जुनाय, **"अध्यात्मविद्या विद्यानाम्"** (भ.गी. १०.३२) इत्यध्यात्मविद्यामेव सकलविद्यावरिष्ठां प्रत्यपादयत् । सा चाध्यात्मविद्या वेदशिरोभिरुपनिषद्भिः प्रतिपत्तव्या । तत्र सन्दिहानानां पुरुषाणां सन्देहाः वैयासिकशारीरकमीमांसानिर्धारितन्यायैरेव परिहर्तव्याः । उपनिषदां सारसङ्ग्रहभूता भगवद्गीता । उपनिषदः, ब्रह्मसूत्राणि, भगवद्गीता इत्येतत् त्रयं भगवान् शङ्करः परमहंसपरिव्राजकरूपधृक् प्रसन्नगम्भीरैः पदनिगुम्भैः व्याख्याय औपनिषदमात्मतत्त्वं स्फुटं प्राचीकशत् । उपनिषदाद्यर्थ–परिशीलनेन समेषामेव आत्मतत्त्वावगमनं दुश्शकमिति मन्वानः श्रीशङ्कराचार्यः सुलभावगाहान् बहून् विवेकचूडामण्यादीन् प्रबन्धान् प्राणैषीत् । विवेकचूडामणिनामाऽयं प्रबन्धः तेषु चूडामणिरिव प्रकाशमानः सर्वत्र प्रचुरप्रचुरः समुपलभ्यते । दुरूहमप्यात्मतत्त्वं करतलामलकवत् तत्र स्फुटीभवति । उपनिषद्भाष्यादिषु दुर्लभप्रवेशानामपि अत्र प्रवेशः सुलभः ।

एतादृशस्य ग्रन्थरत्नस्य यदि काचित् प्रामाणिकी व्याख्याऽपि स्यात् तर्हि हेम्नः परमामोद इति परिकलय्य अस्मदाचार्यपादाः स्फुटप्रतिपत्तये गभीरावगाहाय च व्याख्यां काञ्चन व्यरचयन् । व्याख्याया उत्तमत्वविषये नास्माभिः किञ्चिदपि वक्तव्यमस्ति । श्रीचन्द्रशेखरभारतीतिप्रथित–प्रातःस्मरणीयनामधेया अस्मदाचार्यपादाः कृततपश्चर्याः सर्वतन्त्रस्वतन्त्राः शास्त्रोपदिष्टार्थानुष्ठाननिष्ठागरिष्ठाः अपरोक्षीकृतात्मतत्त्वाः जीवन्मुक्ता अभूवन् इत्येतदेव व्याख्याया उत्कर्षबोधनायालम् । व्याख्याया अपरिपूर्तिः किञ्चिदिव मनस्तोदमावहति । व्याख्यापूरणाय आचार्यपादान् कदाचिद् वयं प्रार्थयाम ।

"वक्तव्या अत्रैव सङ्गृहीताः, निदिध्यासनमन्तरा नाधुनाऽन्यत्र चित्तं व्यावृणोति" इति आशयमाविकुर्वन् । तेनेयमापरिपूर्तिः न न्यूनतमावहतीति अस्माकं मतिः ।

ग्रन्थमिमं सम्यगधीत्य आत्मतत्त्वमधिगम्य सर्वेऽपि लोकाः कृतकृत्या भवेयुः इत्याशास्मते ।

**अभिनवविद्यातीर्थः**

शृङ्गगिरिजगद्गुरु श्रीचन्द्रशेखरभारतीस्वामिनां

करकमलसञ्जातः

# ವಿಷಯಾನುಕ್ರಮಣಿಕೆ


| | ವಿಷಯ | ಪುಟಸಂಖ್ಯೆ |
|---|---|---|
| 1. | ಸದ್ಗುರು ವಂದನೆ | 1 |
| 2. | ದಕ್ಷಿಣಾಮೂರ್ತಿಯ ಧ್ಯಾನ | 1 |
| 3. | ಶಾರದೆಯ ಪ್ರಾರ್ಥನೆ | 2 |
| 4. | ಗಣಪತಿಯ ಪ್ರಾರ್ಥನೆ | 2 |
| 5. | ಚಂದ್ರಮೌಳೀಶ್ವರನ ಪ್ರಾರ್ಥನೆ | 2 |
| 6. | ಅನುವಾದಕರ ಸದ್ಗುರುವಂದನೆ | 2 |
| 7. | ಪ್ರಕರಣ(ಗ್ರಂಥ)ದ ಸಕಲವಿಷಯಸಂಗ್ರಹ | 3 |
| 8. | ಸಂಸ್ಕೃತ ವ್ಯಾಖ್ಯಾನುವಾದ | 7 |
| 9. | ದುರ್ಲಭವಾದ ಮೂರು ಯೋಗಗಳು | 14 |
| 10. | ಮುಕ್ತಿಗೆ ಪ್ರಯತ್ನಿಸದಿರುವವನ ನಿಂದೆ | 14 |
| 11. | ಜ್ಞಾನವಿಲ್ಲದೆ ಮುಕ್ತಿಯಾಗುವುದಿಲ್ಲ | 14 |
| 12. | ದ್ರವ್ಯಾದಿಗಳಿಂದ ಮುಕ್ತಿಯಾಗುವುದಿಲ್ಲ | 15 |
| 13. | ವಿದ್ವಾಂಸನು ಮುಕ್ತಿಗಾಗಿ ಯತ್ನಿಸಬೇಕು | 17 |
| 14. | ಸಂಗ್ರಹವಾಗಿ ಹೇಳಿದ ವಿಷಯದ ವಿವರಣೆ | 19 |
| 15. | ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು | 20 |
| 16. | ಮುಕ್ತಿಗಾಗಿ ಸರ್ವಕರ್ಮಸಂನ್ಯಾಸ ಮಾಡಬೇಕು | 23 |
| 17. | ಕರ್ಮವು ಚಿತ್ತಶುದ್ಧಿಗೆ ಮಾತ್ರ, ವಿಚಾರವಿಲ್ಲದೇ ತತ್ತ್ವಜ್ಞಾನವಿಲ್ಲ | 25 |
| 18. | ಅಧಿಕಾರಿಗೆ ಮಾತ್ರ ಫಲವು ಕೈಗೂಡುವುದು | 29 |
| 19. | ಗುರುವನ್ನು ಆಶ್ರಯಿಸಿಯೇ ಆತ್ಮವಿಚಾರ ಮಾಡಬೇಕು | 31 |
| 20. | ಬ್ರಹ್ಮವಿದ್ಯಾಧಿಕಾರಿಯ ಲಕ್ಷಣ | 32 |
| 21. | ವಿರಕ್ತನಾದ ಮುಮುಕ್ಷುವಿಗೆ ಬ್ರಹ್ಮವಿಚಾರದ ಅರ್ಹತೆ | 33 |
| 22. | ವಿಚಾರಕ್ಕೆ ಮೊದಲು ಇರಬೇಕಾದ ಸಾಧನಗಳು | 35 |
| 23. | ಸಾಧನಚತುಷ್ಟಯದ ಪ್ರದರ್ಶನ | 37 |
| 24. | ಸಾಧನಚತುಷ್ಟಯದ ವಿವರಣೆ | 39 |
| 25. | ವೈರಾಗ್ಯಸ್ವರೂಪ | 40 |
| 26. | ಶಮನಿರೂಪಣೆ | 42 |
| 27. | ದಮನಿರೂಪಣೆ | 43 |
| 28. | ಉಪರತಿಯ ನಿರೂಪಣೆ | 44 |
| 29. | ತಿತಿಕ್ಷೆಯ ನಿರೂಪಣೆ | 45 |
| 30. | ಶ್ರದ್ಧೆಯ ನಿರೂಪಣೆ | 46 |
| 31. | ಸಮಾಧಾನ | 47 |
| 32. | ಮುಮುಕ್ಷುತ್ವ | 49 |
| 33. | ತೀವ್ರವೈರಾಗ್ಯ, ತೀವ್ರಮೋಕ್ಷೇಚ್ಛೆ ಮಾತ್ರ ಸಫಲ | 52 |

॥ श्रीः ॥

॥ श्रीसच्चिदानन्दशिवाभिनवनृसिंहभारतीचरणारविन्दाभ्यां नमः ॥

श्रीशङ्करभगवत्पादविरचितः

# विवेकचूडामणिः

शृङ्गगिरि श्रीजगद्गुरु श्रीचन्द्रशेखरभारतीस्वामिभिः अनुगृहीतं संस्कृतव्याख्यानम्

(सद्गुरुवन्दनम्)

**सर्ववेदान्तसिद्धान्तगोचरं तमगोचरम् ।**
**गोविन्दं परमानन्दं सद्गुरुं प्रणतोऽस्म्यहम् ॥१॥**

### ಸದ್ಗುರುವಂದನೆ

1. ಎಲ್ಲಾ ಉಪನಿಷತ್ತುಗಳ ಸಿದ್ಧಾಂತವಾಗಿ ಗೋಚರನಾದರೂ, (ಇಂದ್ರಿಯ ಮುಂತಾದವುಗಳಿಗೆ ಯಾವಾಗಲೂ) ಗೋಚರನಾಗದಿರುವ ನಿರತಿಶಯಾನಂದ ಸ್ವರೂಪನಾದ ಗೋವಿಂದ(ಭಗವತ್ಪಾದ) ಎಂಬ ಸದ್ಗುರುವನ್ನು ನಾನು ವಂದಿಸುತ್ತೇನೆ.

(दक्षिणामूर्तिध्यानम्)

**संसारसागरनिमग्नजनोद्दिधीर्षुः योऽवातरच्छिवनृसिंहगुरुच्छलेन ।**
**जाड्यान्धकारहरणं करुणासमुद्रं तं दक्षिणास्यमनिशं हृदि भावयामि ॥**

### ದಕ್ಷಿಣಾಮೂರ್ತಿಯ ಧ್ಯಾನ

ಸಂಸಾರವೆಂಬ ಸಮುದ್ರದಲ್ಲಿ ಮುಳುಗಿರುವ ಜನರನ್ನು ಉದ್ಧರಿಸುವ ಇಚ್ಛೆಯಿಂದ ಯಾವನು ಶ್ರೀ ಶಿವಾಭಿನವನೃಸಿಂಹಭಾರತೀಸ್ವಾಮಿಗಳ ರೂಪದಿಂದ ಅವತರಿಸಿದನೋ, ಜಡತೆಯೆಂಬ ಕತ್ತಲೆಯನ್ನು ದೂರಮಾಡುವವನೂ ದಯೆಯ ಸಮುದ್ರವೂ ಆದ ಆ ದಕ್ಷಿಣಾಮೂರ್ತಿಯನ್ನು ಯಾವಾಗಲೂ ಮನಸ್ಸಿನಲ್ಲಿ ಭಾವಿಸುತ್ತೇನೆ.

(शारदाप्रार्थनम्)

**ज्ञानस्वरूपे वाग्देवि भगवत्पादपूजिते ।**
**चूडमणिं विवेकादिं व्याकुरुष्व मुखान्मम ॥**

**प्रसन्नानां गभीराणां वचसां देशिकेशितुः ।**
**भावस्त्वत्कृपया चित्ते भासतां मम शारदे ॥**

**ಶಾರದೆಯ ಪ್ರಾರ್ಥನೆ**

ಜ್ಞಾನದ ಸ್ವರೂಪಳೂ ಶ್ರೀ ಶಂಕರಭಗವತ್ಪಾದರಿಂದ ಪೂಜಿತಳೂ ಆದ ಮಾತಿನ ಒಡತಿಯೇ, ವಿವೇಕ ಚೂಡಾಮಣಿಯನ್ನು ನನ್ನ ಮೂಲಕ ವ್ಯಾಖ್ಯಾನಿಸು.

ಶಾರದೆಯೇ, ಶ್ರೀಗುರು ಮಹಾರಾಜರ ಪ್ರಸನ್ನವೂ ಗಂಭೀರವೂ ಆದ ಮಾತುಗಳ ಅಭಿಪ್ರಾಯವು ನಿನ್ನ ದಯೆಯಿಂದ ನನ್ನ ಅಂತಃಕರಣದಲ್ಲಿ ತೋರಲಿ.

(गणेशप्रार्थनम्)

**रत्नगर्भगणेशान विघ्नध्वान्तविभाकर।**
**निर्विघ्नं पूरयस्वेमां व्याख्यां कारुण्यशेवधे॥**

**ಗಣಪತಿಯ ಪ್ರಾರ್ಥನೆ**

ತೊಂದರೆಯೆಂಬ ಕತ್ತಲೆಗೆ ಸೂರ್ಯನೂ ದಯೆಯ ನಿಧಿಯೂ ಆದ ರತ್ನಗರ್ಭ ಗಣಪತಿಯೇ, ಈ ವ್ಯಾಖ್ಯಾನವನ್ನು ನಿರ್ವಿಘ್ನವಾಗಿ ಪೂರ್ಣಗೊಳಿಸು.

(चन्द्रमौळीश्वरप्रार्थनम्)

**चन्द्रमौळीश्वर विभो ब्रह्मविद्यासमाश्रित।**
**स्वानुभूतिं प्रयच्छाशु चिन्मुद्राविलसत्कर॥**

**ಚಂದ್ರಮೌಳೀಶ್ವರನ ಪ್ರಾರ್ಥನೆ**

ಸರ್ವವ್ಯಾಪಕನೂ ಬ್ರಹ್ಮವಿದ್ಯೆಯ ಆಗರವೂ ಜ್ಞಾನಮುದ್ರೆಯಿಂದ ಶೋಭಿಸುವ ಕೈಯುಳ್ಳವನೂ ಆದ ಚಂದ್ರಮೌಳೀಶ್ವರನೇ, ಕೂಡಲೇ ಆತ್ಮಸಾಕ್ಷಾತ್ಕಾರವನ್ನು ನೀಡು.

(अनुवादककृतं सद्गुरुवन्दनम्)

**अनन्तमहितैर्गुणैः परमहंसराजोचितैः**
**शमदमादिभिरुदारधीप्रकटितात्मबोधश्रियः।**
**तपोभिरमितैश्चितैरुदितनिग्रहानुग्रह–**
**प्रपूर्णवरशक्तिकान् गुरुवरान्नमाम्यन्वहम्॥**

**ಅನುವಾದಕರ ಸದ್ಗುರುವಂದನೆ**

ಪರಮಹಂಸ ಚಕ್ರವರ್ತಿಗೆ ಯೋಗ್ಯವಾದ ಶಮವೇ ಮೊದಲಾದ ಕೊನೆಯಿಲ್ಲದ ಹಾಗೂ ಎಣೆಯಿಲ್ಲದ ಗುಣಗಳಿಂದ ಪ್ರಕಟಿಸಿದ ಆತ್ಮಜ್ಞಾನದ ಶೋಭೆಯುಳ್ಳವರೂ, ಅಪರಿಮಿತವೂ ಸಂಚಿತವೂ ಆದ ತಪಸ್ಸುಗಳಿಂದ ಉದಿಸಿದ ನಿಗ್ರಹ ಮತ್ತು ಅನುಗ್ರಹಗಳಿಂದ ತುಂಬಿದ ಶ್ರೇಷ್ಠವಾದ ಶಕ್ತಿಯುಳ್ಳವರೂ ಆದ, **ಶ್ರೀ ಶಿವಾಭಿನವನೃಸಿಂಹಭಾರತೀಗುರುವರೇಣ್ಯರ**ನ್ನು ಪ್ರತಿದಿನವೂ ನಾನು ನಮಸ್ಕರಿಸುತ್ತೇನೆ.

(श्रीचन्द्रशेखरभारतीप्रणामः)

**राजाधिराजमकुटाग्रमणिप्रदीपैः**
**नीराजिते कनकपुष्पचयार्चिते तैः ।**
**श्रीचन्द्रशेखरजगद्गुरुपादपद्म–**
**युग्मे प्रणामकुसुमाञ्जलिमर्पयामि ॥**

ರಾಜ–ಮಹಾರಾಜರ ಕಿರೀಟದ ತುದಿಯಲ್ಲಿರುವ ರತ್ನದೀಪದಿಂದ ಬೆಳಗುವ, ಅವರಿಂದ ಬಂಗಾರದ ಹೂಗಳಿಂದ ಪೂಜಿತವಾದ ಜಗದ್ಗುರು ಶ್ರೀ **ಚಂದ್ರಶೇಖರಭಾರತೀಮಹಾಸ್ವಾಮಿ**ಗಳ ಪಾದಕಮಲಗಳಲ್ಲಿ ನಮಸ್ಕಾರವೆಂಬ ಹೂಗಳ ಬೊಗಸೆಯನ್ನು ಅರ್ಪಿಸುತ್ತೇನೆ.

(श्रीमदभिनवविद्यातीर्थवन्दनम्)

**विद्यानर्घ्यतपोनिधेर्गुरुवराल्लब्धोपदेशोऽर्जित–**
**श्रीविद्यातपसः सुविस्तृतयशोभास्वद्दिगन्तान्तरान् ।**
**चन्द्राभाननसुन्दरान् मृदुवचःपीयूषमुग्धाखिलान्**
**विद्यातीर्थगुरूनवानहमिमान् वन्दे यतीन्द्रान् सदा ॥**

ವಿದ್ಯೆ ಮತ್ತು ಅಮೂಲ್ಯವಾದ ತಪಸ್ಸಿನ ನಿಧಿಯೂ ಗುರುವರೇಣ್ಯರಾದ ಶ್ರೀ **ಚಂದ್ರಶೇಖರ ಭಾರತೀಸ್ವಾಮಿ**ಗಳಿಂದ ದೊರೆತ ಉಪದೇಶದಿಂದ ಹೆಚ್ಚಿದ ಶ್ರೀವಿದ್ಯೆಯ ಉಪಾಸನೆಯುಳ್ಳವರೂ, ಎಲ್ಲೆಲ್ಲೂ ಹರಡಿದ ಕೀರ್ತಿಯಿಂದ ಬೆಳಗಿದ ದಿಙ್ಮಂಡಲವುಳ್ಳವರೂ, ಚಂದ್ರನಂತೆ ಸುಂದರವಾದ ಮುಖಮಂಡಲವುಳ್ಳವರೂ ಮೃದುವಾದ ಮಾತೆಂಬ ಅಮೃತದಿಂದ ಎಲ್ಲರನ್ನೂ ಮೋಹಗೊಳಿಸುವ ಶ್ರೀ **ಅಭಿನವವಿದ್ಯಾತೀರ್ಥ–ಮಹಾಸ್ವಾಮಿ**ಗಳನ್ನು ಯಾವಾಗಲೂ ನಾನು ವಂದಿಸುತ್ತೇನೆ.

(प्रकरणार्थसङ्ग्रहः)

**जन्तूनां नरजन्म दुर्लभमतः पुंस्त्वं ततो विप्रता**
**तस्माद् वैदिकधर्ममार्गपरता विद्वत्त्वमस्मात् परम् ।**
**आत्मानात्मविवेचनं स्वनुभवो ब्रह्मात्मना संस्थितिः**
**मुक्तिर्नो शतकोटिजन्मसु कृतैः पुण्यैर्विना लभ्यते ॥२॥**

**ಪ್ರಕರಣ(ಗ್ರಂಥ)ದ ಸಕಲ ವಿಷಯಸಂಗ್ರಹ**

ಪ್ರಾಣಿಗಳಿಗೆ ಮನುಷ್ಯಜನ್ಮವೂ ಅದಕ್ಕಿಂತಲೂ ಪುರುಷನಾಗಿರುವುದೂ ಅದಕ್ಕಿಂತಲೂ ಬ್ರಾಹ್ಮಣನಾಗಿರುವುದೂ ಅದಕ್ಕಿಂತಲೂ ವೈದಿಕಧರ್ಮಮಾರ್ಗದ ಅನುಸರಣೆಯೂ ಅದಕ್ಕಿಂತ ಶಾಸ್ತ್ರಾರ್ಥ ಪಾಂಡಿತ್ಯವೂ ಮಿಗಿಲಾದುದು. ಆತ್ಮ–ಅನಾತ್ಮಗಳನ್ನು ಬೇರ್ಪಡಿಸುವುದೂ(ಆತ್ಮ) ಸಾಕ್ಷಾತ್ಕಾರವೂ ಬ್ರಹ್ಮವೇ ಆತ್ಮವೆಂಬ ಭಾವದಲ್ಲಿ ನೆಲೆನಿಲ್ಲುವ ಮೋಕ್ಷವೂ ನೂರಾರು ಕೋಟಿ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯಗಳಿಲ್ಲದೆ ದೊರೆಯುವುದಿಲ್ಲ.

भगवद्गीतासु–
अशोच्यानन्वशोचस्त्वं प्रज्ञावादांश्च भाषसे।
गतासूनगतासूंश्च नानुशोचन्ति पण्डिताः॥ (२.११)

इति श्लोकवद्विवेकचूडामणि–प्रकरणप्रतिपाद्यकृत्स्नार्थसङ्ग्राहकोऽयं श्लोकः जन्तूनामित्यादिः । आस्तिकस्यैव शास्त्रेऽधिकारात् प्रथमं नरजन्मप्राशस्त्यकथनमुखेन शरीरव्यतिरिक्तात्मास्तित्वं तावद् ध्वनयति– जन्तूनां नरजन्म दुर्लभमिति।

उक्तं च शारीरकभाष्ये– "शास्त्रीये तु व्यवहारे यद्यपि बुद्धिपूर्वकारी नाविदित्वा आत्मनः परलोकसम्बन्धमधिक्रियते" (१.१) इति।

जन्तूनां जननशीलानां प्राणिनां नरजन्म मानुष्यकं दुर्लभमिति । तत्र एकेनैव बहुषु जन्मसु प्राप्तव्येषु किल नरजन्म दुर्लभमिति वक्तुं शक्यं, शरीरसम्बन्धस्यैव जन्मशब्दार्थत्वात्। यदा चैकस्य अनेकशरीरयोगः तदा शरीरव्यतिरिक्तत्वमात्मनः सूचितमेव। प्रसिद्धं खल्वनेकैः कुसुमैः युज्यमानं सूत्रं तेभ्योऽतिरिच्यत इति, अनेकानि वासांसि क्रमेण युगपद्वा परिदधच्छरीरं तेभ्यो भिद्यत इति च। तथा च सुखहेतुशरीरप्राप्तये दुःखहेतुशरीरनिवृत्तये च पुण्ये प्रवृत्तिः पापान्निवृत्तिश्च युज्यत इति, विधिनिषेधात्मककर्मशास्त्रे आस्तिकस्यैवाधिकारः । एवं ज्ञानेन सकलकर्मनिर्हरणार्थं मोक्षशास्त्रेऽपि।

यदि शरीरमेवात्मा स्यात् तस्य प्रत्यक्षसिद्धत्वात्, 'आत्मा वा अरे द्रष्टव्यः श्रोतव्यो मन्तव्यो निदिध्यासितव्यः' (बृ.उ.२.४.५) इत्यादिदर्शनसाधनविधानं कथमुपपद्येत।

शुभैराप्नोति देवत्वं निषिद्धैर्नारकीं तनुम्।
उभाभ्यां पुण्यपापाभ्यां मानुष्यं लभतेऽवशः॥ (नै.सि.१.४१)

इति चैकस्यैव शुभाशुभमिश्रकर्मभिः विजातीयशरीरलाभं दर्शयति । कथमन्यथा लोकप्रसिद्धं सुखदुःखादिवैचित्र्यमुपपद्यते । यदि कर्मनिरपेक्षः ईश्वरः एव कांश्चित् प्राणिनः सुखिनः कांश्चिदन्यादृशांश्च सृजेत् वैषम्यनैर्घृण्ये भजेत। तथाचेश्वरत्वं हीयते।

तदुक्तम्– 'वैषम्यनैर्घृण्ये न सापेक्षत्वात् तथाहि दर्शयति, न कर्माविभागादिति चेन्नानादित्वात्, उपपद्यते चाप्युपलभ्यते च' (ब्र.सू. २.१.३४–३६) इति सूत्रैः ईश्वरस्य कर्मसापेक्षत्वं संसारस्यानादित्वं च । धर्मभूतः संसार एव अनादिश्चेत् तदाश्रयस्य संसारिणोऽनादित्वं कैमुतिकन्यायसिद्धम् । तत्सिद्धमात्मनः शरीरव्यतिरिक्तत्वं, शरीरातिरिक्तात्मास्तित्ववाद्येवास्तिक इति। शास्त्रव्यवहारनिदानमास्तिक्यमिति जन्तूनां नरजन्म दुर्लभम् इत्यनेन सूचितम्।

ततः पुंस्त्वं, स्त्रिया वेदेऽधिकाराभावात् उपनिषदेकसमधिगम्य आत्मा नैव ज्ञातुं शक्यत इत्यभिप्रायः । तत्रापि त्रैवर्णिकानां वेदाधिकारसत्त्वेऽपि क्षत्रियवैश्ययोः राज्यपरिपालनकृष्यादिरूपाणां चित्तविक्षेपहेतुभूतानां बाह्यव्यापाराणां सत्त्वादैदम्पर्येण आत्मविचारः दुर्घट इति–

मुखजानामयं धर्मो वैष्णवं लिङ्गधारणम् ।
बाहुजातोरुजातानां नायं धर्मो विधीयते ॥

इति स्मृत्यनुसारेणैदम्पर्येण ब्रह्मविचारसाधनसंन्यासस्यानवकाशाद् एकस्मिन्नेव जन्मनि ब्रह्माधिगमः तयोर्दुर्लभ इति द्योतनार्थं द्विजत्वं ततः इत्यनुक्त्वा ततो विप्रतेत्युक्तम् ।

ब्राह्मणस्य तु देहोऽयं नोपभोगाय कल्पते ।
इह क्लेशाय महते प्रेत्यानन्तसुखाय च ॥

इति वसिष्ठस्मृत्या वेदविहितप्रवृत्तिनिवृत्तिधर्मानुष्ठानेन एकस्मिन्नेव जन्मनि ब्रह्माधिगन्तुं शक्यं ब्राह्मणेनेति भावः । अत एव तस्माद् वैदिकधर्ममार्गपरतेत्युक्तम् । न केवलं विप्रतया लब्धव्यं लभ्यते, अपि तु तां लब्ध्वा तदुचितधर्मानुष्ठानेनेति भावः । 'धर्मो विश्वस्य जगतः प्रतिष्ठा... धर्मेण पापमपनुदति' (म.ना.उ.१७.६) इति श्रुत्या धर्मस्यैव सुखसाधनत्वं दुःखहेतुपापनिवर्तकत्वं, तन्निवृत्त्या दुःखाभावहेतुत्वं चेति, सुखं मे भूयात् दुःखं मे माभूदिति सकलजनकामनाविषयसुखदुःखाभावरूपपुरुषार्थसाधनत्वं तस्यैवेति द्योतयितुं धरतीति धर्मः, ध्रियतेऽनेनेति वा धर्मः इति व्युत्पत्त्या जगत्प्रतिष्ठाहेतुत्वं तस्य श्रुतिबोधितं सूचयितुं वैदिककर्ममार्गपरतेत्यनुक्त्वा धर्ममार्गेत्युक्तम् । वैदिककर्मणः धर्मत्वेऽपि कर्मशब्देन विवक्षितार्थालाभात् । यदि धर्मव्यतिरिक्तं किञ्चित्सुखसाधनं दुःखनिवृत्तिसाधनं च स्यात् तत्साधनसम्पादनेन सर्वो लोकः सर्वदाऽपि सुखी, निवृत्तदुःखश्च स्यादेव । धर्मस्य तु अतीन्द्रियत्वेन शास्त्रैकसमधिगम्यत्वात् जनानां तज्ज्ञानस्य शास्त्रमन्तराऽसम्भवात्साधना–लाभात् फलालाभ इति प्रतिपादयितुं शक्यते । तदुक्तं वैदिकेति ।

धर्मस्य लक्षणं, 'चोदनालक्षणोऽर्थो धर्मः' (पू.मी.१.१.२) इति जैमिनिमहर्षिभिः सूत्रितं यद्वेदप्रमाणकत्वं तद्वैदिकेति विशेषणेन अवगमितम् । न हि वेदं विना प्रमाणान्तरं धर्मविषये पदमाधातुम् ईष्टे, तस्यातीन्द्रियत्वेन प्रत्यक्षस्य तत्राप्रसरात् । अत एव नानुमानं तत्र प्रसरति, प्रत्यक्षमूलकत्वादनुमानप्रवृत्तेः । अत एव वेदव्यतिरिक्तशब्दोऽपि न तं बोधयितुं पारयति, प्रत्यक्षादिनाऽवधारितस्यैवार्थस्य लौकिकशब्देन बोधयितुं शक्यत्वात् । स्मृतीनामपि

पौरुषेयत्वेन पुरुषाणां भ्रमप्रमादादिसम्भवेन कर्तृदोषनिबन्धनाप्रामाण्यशङ्कायामपौरुषेयतया दोषगन्धानागन्धितश्रुतिमूलकतयैव प्रमाणस्य वक्तव्यतया वेदव्यतिरिक्तस्य शब्दस्य धर्मे स्वतोऽप्रमाणत्वात्।

किञ्च स्मृतिकर्तारो वा अतीन्द्रियं धर्मं कथं व्यजानन्? योगजसामर्थ्येनेति चेत्, तत्सामर्थ्यं कथं तैः सम्पादितम्? धर्मानुष्ठानेनेति चेत्, स धर्मः कथं ज्ञातः? अत एव–

'यो ब्रह्माणं विदधाति पूर्वं  यो वै वेदांश्च प्रहिणोति तस्मै।' (श्वे.उ.६.१८) इति प्रथमं सृज्यमानस्य हिरण्यगर्भस्यापि ईश्वरानुगृहीतवेदमूलकमेव धर्मज्ञानमिति बोधयति श्रुतिः। किं वक्तव्यमितरेषाम्? अतः सुष्ठूक्तं वैदिकेति।

"अब्भक्षा वायुभक्षा" इतिवद्वेदैकमेयत्वं धर्मस्य बोधयति। अत्र धर्मशब्देन प्रवृत्तिधर्मः निवृत्तिधर्मश्च कथ्येते। उक्तं हि गीताभाष्ये– "द्विविधो हि वेदोक्तो धर्मः प्रवृत्तिलक्षणो निवृत्तिलक्षणश्च" (१.१) इति।

धर्म एव परमं साधनं नित्यसुखावाप्तौ नान्यदपेक्ष्यमस्तीति कर्ममीमांसकाः। तान्कटाक्षयति मार्गेति। तेन परमपुरुषार्थसाधनीभूतब्रह्मसाक्षात्कारसाधनवेदान्तविचारहेतुत्वेन संन्यासरूपनिवृत्तिधर्मस्य तत्साधनवैराग्यहेतुभूतचित्तशुद्धिहेतुत्वेन निष्कामकर्मानुष्ठानरूप–प्रवृत्तिधर्मस्य चापेक्षितत्वं, न तु साक्षान्निरतिशयसुखसाधनत्वं तदुभयस्येति सूचितम्। तदुक्तम् भगवता बादरायणेन –

द्वाविमावथ पन्थानौ यत्र वेदाः प्रतिष्ठिताः।
प्रवृत्तिलक्षणो धर्मः निवृत्तिश्च प्रकीर्तितः॥ इति। (मो.ध.२४०.६)

तथा च ब्राह्मणेन उपनयनानन्तरम्–
वेदो नित्यमधीयतां तदुदितं कर्म स्वनुष्ठीयतां
तेनेशस्य विधीयतामपचितिः काम्ये मतिस्त्यज्यताम्।
पापौघः परिधूयतां भवसुखे दोषोऽनुसन्धीयताम्
आत्मेच्छा व्यवसीयतां निजगृहात्तूर्णं विनिर्गम्यताम्॥

सङ्गः सत्सु विधीयतां भगवतो भक्तिर्दृढाऽऽधीयतां
शान्त्यादिः परिचीयतां दृढतरं कर्माशु सन्त्यज्यताम्।

इति सोपानपञ्चकोपदिष्टरीत्या ईश्वरार्पणबुद्ध्या कर्म कुर्वाणेन चित्तं शोधयित्वा विषयेभ्यः विरज्य कर्मभ्यस्समुपरमितव्यमित्येतद् बोधितम् । तदुक्तं मोक्षधर्मेषु–

नैतादृशं ब्राह्मणस्यास्ति वित्तं यथैकता समता सत्यता च ।
शीलं स्थितिर्दण्डनिधानमार्जवं ततस्ततश्चोपरतिः क्रियाभ्यः ॥ इति विद्वत्त्वमस्मात्परम् ।

तत्र प्रवृत्तिधर्मविषये एवं योजना– 'यदेव विद्यया करोति श्रद्धयोपनिषदा तदेव वीर्यवत्तरं भवति' (छां.उ. १.१.१०) इति छान्दोग्यश्रुत्या क्रियमाणं कर्म तदङ्गभूतमन्त्रार्थज्ञानपुरस्सरं क्रियते चेद्भूयसे फलायेति बोधितं भवति । तदुक्तं तत्रैव भाष्ये "दृष्टं हि लोके वणिक्छबरयोः पद्मरागमणिविक्रये वणिजो विज्ञानाधिक्यात्फलाधिक्यम्" इति । निवृत्तिधर्मविषये "संन्यस्य श्रवणं कुर्यात्" इति विधानात्संन्यासोत्तरकालिकवेदान्तवाक्यश्रवणजन्यपरोक्षज्ञानवत्त्वं विद्वत्त्वम् । अस्मात्परम् आत्मनात्मविवेचनम् । इदं ग्रन्थ एव उत्तरत्र स्पष्टयिष्यते । तेन मननं युक्तिभिः श्रुतार्थदृढीकरणार्थमनुचिन्तनरूपं संशयभावनानिरासकमुक्तं भवति ।

ततः स्वनुभवः, निदिध्यासनपूर्वकब्रह्मसाक्षात्कारः कथितो भवति । अत एव स्वनुभव इत्युक्तम्, विपरीतभावनानिवर्तकनिदिध्यासनाभावे श्रवणमननाभ्यां जायमानानुभवः सौष्ठवं नाश्नुत इति । एतेन शुभेच्छा विचारणा तनुमानसा सत्त्वापत्तिश्चेति ज्ञानभूमिकाचतुष्टयं कथितमासीत् ।

असंसक्तिः पदार्थाभावना तुर्यगा च, "ब्रह्मात्मना संस्थितिः मुक्तिः" इत्यत्र संस्थितिशब्देन वासनाक्षय–मनोनाश–सहकृतस्वनुभवबोधकेन व्यञ्जिताः । तेन सालोक्य–सामीप्य–सारूप्य–सायुज्यानां मुख्यमुक्तित्वाभावश्च सूचितो भवति । सगुणविषयकतया तेषां चतुर्णामपि मिथ्यात्वात्, परिच्छेदत्रयशून्यत्वरूपब्रह्मत्वस्य सगुणेऽसम्भवात् । ब्रह्मात्मना संस्थितिः कल्पितसकलविधोपाधिसम्बन्धविधुरनित्यशुद्धबुद्धमुक्तप्रत्यगभिन्नपरिपूर्णस्वरूपेणावस्थानं कैवल्यमेव मुक्तिः, शतकोटिजन्मसु कृतैः पुण्यैर्विना नो लभ्यते इत्यन्वयः ॥२॥

## ಸಂಸ್ಕೃತ ವ್ಯಾಖ್ಯಾನುವಾದ

ಭಗವದ್ಗೀತೆಯಲ್ಲಿ–ನೀನು ಶೋಕಕ್ಕೆ ಯೋಗ್ಯರಲ್ಲದವರಿಗೆ ಶೋಕಿಸುತ್ತೀಯೆ. ವಿಚಾರದಿಂದ ಕೂಡಿದ ಮಾತುಗಳನ್ನೂ ಆಡುತ್ತೀಯೆ. ಆತ್ಮಜ್ಞಾನಿಗಳು ಪ್ರಾಣವು ಹೋದವರಿಗಾಗಲಿ ಪ್ರಾಣವು ಹೋಗದೇ ಇರುವವರಿಗಾಗಲಿ ಶೋಕಿಸುವುದಿಲ್ಲ (2.11) ಎಂದು ಹೇಳಿರುವ ಶ್ಲೋಕದಂತೆ ಜಂತೂನಾಂ ಇತ್ಯಾದಿ ಶ್ಲೋಕವು ವಿವೇಕಚೂಡಾಮಣಿ ಪ್ರಕರಣ(ಗ್ರಂಥ)ದಲ್ಲಿ ಪ್ರತಿಪಾದಿಸುವ ಸಕಲ ವಿಷಯವನ್ನೂ ಸಂಗ್ರಹಿಸುವಂತಹದು. ಆಸ್ತಿಕನಿಗೆ ಮಾತ್ರ ಶಾಸ್ತ್ರಾಧಿಕಾರವಿರುವುದರಿಂದ ಮೊದಲು ನರಜನ್ಮದ ಪ್ರಾಶಸ್ತ್ಯವನ್ನು ಹೇಳುವುದರ ಮೂಲಕ ಶರೀರಕ್ಕೆ ಬೇರೆಯಾಗಿ ಆತ್ಮನಿದ್ದಾನೆಂಬುದನ್ನು **'ಜಂತೂನಾಂ ನರಜನ್ಮ ದುರ್ಲಭಂ'** ಎಂಬುದರಿಂದ ತೋರಿಸಿದ್ದಾರೆ.

ಶಾರೀರಕಭಾಷ್ಯದಲ್ಲಿಯೂ,[1] ಶಾಸ್ತ್ರೀಯವಾದ ವ್ಯವಹಾರದಲ್ಲಾದರೋ ಬುದ್ಧಿಪೂರ್ವಕವಾಗಿ ಮಾಡುವವನು ಆತ್ಮನ ಪರಲೋಕದ ಸಂಬಂಧವನ್ನು ತಿಳಿಯದೆ ಅಧಿಕಾರವನ್ನು ಪಡೆಯದಿದ್ದರೂ.... (ಬ್ರ.ಸೂ.1.1) ಎಂದಿದೆ.

ಜಂತೂನಾಂ–ಹುಟ್ಟುವ ಸ್ವಭಾವವುಳ್ಳ ಪ್ರಾಣಿಗಳಿಗೆ, ನರಜನ್ಮ–ಮನುಷ್ಯನ ಜನ್ಮವು ದುರ್ಲಭ. ಒಬ್ಬನೇ ಅನೇಕ ಜನ್ಮಗಳನ್ನು ಪಡೆಯುವುದಾದರೆ ಮಾತ್ರ ನರಜನ್ಮವು ದುರ್ಲಭವೆಂದು ಹೇಳಲು ಸಾಧ್ಯವಾಗುತ್ತದೆ. ಏಕೆಂದರೆ ಶರೀರಸಂಬಂಧವೇ ಜನ್ಮಶಬ್ದದ ಅರ್ಥವಾಗಿರುತ್ತದೆ. ಒಬ್ಬನಿಗೆ ಅನೇಕ ಶರೀರಸಂಬಂಧವು ಇದೆಯೆಂದಾದರೆ ಆತ್ಮನು ಶರೀರಕ್ಕಿಂತ ಬೇರೆಯೆಂದು ಹೇಳಿದಂತಾಯಿತು. ಹಲವಾರು ಹೂಗಳಿಂದ ಕೂಡಿದ ದಾರವು ಅವುಗಳಿಂದ ಬೇರೆಯೆಂಬುದೂ ಹಲವು ಬಟ್ಟೆಗಳನ್ನು ಕ್ರಮವಾಗಿಯೋ ಒಮ್ಮೆಯೋ ಧರಿಸುವ ದೇಹವು ಅವುಗಳಿಂದ ಬೇರೆಯೆಂಬುದೂ ಪ್ರಸಿದ್ಧವಾಗಿದೆಯಷ್ಟೇ? ಹಾಗಾದರೆ ಸುಖಸಾಧನವಾದ ಶರೀರದ ಪ್ರಾಪ್ತಿಗಾಗಿಯೂ, ದುಃಖಸಾಧನವಾದ ಶರೀರದ ನಿವೃತ್ತಿಗಾಗಿಯೂ (ಕ್ರಮವಾಗಿ) ಪುಣ್ಯದಲ್ಲಿ ಪ್ರವೃತ್ತಿಯೂ ಪಾಪದಿಂದ ನಿವೃತ್ತಿಯೂ ಸರಿಹೋಗುವ ಕಾರಣ ವಿಧಿನಿಷೇಧರೂಪವಾದ ಕರ್ಮಶಾಸ್ತ್ರದಲ್ಲಿ ಆಸ್ತಿಕನಿಗೇ ಅಧಿಕಾರವಿರುತ್ತದೆ. ಹೀಗೆ ಜ್ಞಾನದಿಂದ ಸಮಸ್ತ ಕರ್ಮಗಳನ್ನು ಪರಿಹರಿಸುವುದಕ್ಕಾಗಿ ಮೋಕ್ಷಶಾಸ್ತ್ರದಲ್ಲಿಯೂ (ಆಸ್ತಿಕನಿಗೇ ಅಧಿಕಾರ).

ಶರೀರವೇ ಆತ್ಮವಾಗಿದ್ದರೆ ಅದು ಪ್ರತ್ಯಕ್ಷ ಸಿದ್ಧವಾಗಿರುವುದರಿಂದ, ಆತ್ಮನನ್ನು ನೋಡಬೇಕು ಕೇಳಬೇಕು ತಿಳಿಯಬೇಕು ಧ್ಯಾನಿಸಬೇಕು (ಬೃ.ಉ.2.4.5) ಎಂದು ಮುಂತಾಗಿ ಆತ್ಮಸಾಕ್ಷಾತ್ಕಾರ(ಮತ್ತು ಅದರ) ಸಾಧನಗಳ ವಿಧಾನವು ಹೇಗೆ ಸರಿಯಾದೀತು?

ವಿಹಿತಕರ್ಮಗಳಿಂದ ದೇವಜನ್ಮವನ್ನೂ ನಿಷಿದ್ಧ(ಕರ್ಮ)ಗಳಿಂದ ನರಕದ ಶರೀರವನ್ನೂ ಪುಣ್ಯಪಾಪಗಳೆರಡರಿಂದ ಮನುಷ್ಯಜನ್ಮವನ್ನೂ ಅಸ್ವತಂತ್ರನಾಗಿ ಪಡೆಯುತ್ತಾನೆ (ನೈ.ಸಿ1.41) ಎಂದು (ಸ್ಮೃತಿಯು) ಒಬ್ಬನಿಗೇ ಶುಭ, ಅಶುಭ ಮತ್ತು ಮಿಶ್ರ ಕರ್ಮಗಳಿಂದ ವಿಲಕ್ಷಣವಾದ ಶರೀರದ ಪ್ರಾಪ್ತಿಯನ್ನು ತೋರಿಸುತ್ತದೆ. ಹಾಗಿಲ್ಲದಿದ್ದರೆ ಲೋಕಪ್ರಸಿದ್ಧವಾದ ಸುಖ–ದುಃಖ ಮುಂತಾದವುಗಳ ವೈಚಿತ್ರ್ಯವು ಹೇಗೆ ಸರಿಹೋದೀತು?

ಈಶ್ವರನು ಕರ್ಮಗಳನ್ನು ಅಪೇಕ್ಷಿಸದಿರುವವನಾಗಿಯೇ ಕೆಲವು ಪ್ರಾಣಿಗಳನ್ನು ಸುಖಿಗಳನ್ನಾಗಿಯೂ, ಕೆಲವು (ಪ್ರಾಣಿಗಳನ್ನು) ದುಃಖಿಗಳನ್ನಾಗಿಯೂ ಸೃಷ್ಟಿಸಿದರೆ ಪಕ್ಷಪಾತ ಮತ್ತು ನಿಷ್ಕರುಣತೆಯನ್ನು ಹೊಂದಬಹುದು. ಹಾಗಾದಲ್ಲಿ (ಅವನಿಗೆ) ಈಶ್ವರತ್ವವೇ ಇಲ್ಲವಾದೀತು. ವೈಷಮ್ಯ....ದರ್ಶಯತಿ[2], ನ ಕರ್ಮಾ....ತ್ವಾತ್,[3] ಉಪಪದ್ಯತೇ....ಚ (2.1.34.36) ಎಂಬ (ಬ್ರಹ್ಮ)ಸೂತ್ರಗಳಿಂದ ಈಶ್ವರನು ಕರ್ಮ ಅಪೇಕ್ಷೆಯುಳ್ಳವನಾಗಿರುವುದೂ, ಸಂಸಾರವು ಅನಾದಿಯಾಗಿರುವುದೂ ಉಕ್ತವಾಗಿದೆ. ಧರ್ಮವಾದ ಸಂಸಾರವೇ

---

1. ಶಾರೀರಕ ಭಾಷ್ಯವೆಂದರೆ ಬ್ರಹ್ಮಸೂತ್ರಗಳ ಮೇಲಿರುವ ಶಾಂಕರಭಾಷ್ಯ. ಅದನ್ನು ಶಾರೀರಕಮೀಮಾಂಸೆ ಎನ್ನಲಾಗಿದೆ. शरीरमेव शरीरकम् । तत्र निवासी शारीरको जीवात्मा । तस्य त्वम्पदाभिधेयस्य तत्तदभिधेयपरमात्मरूपता–मीमांसा या सा तथोक्ता ಎಂದು ಭಾಮತಿಯಲ್ಲಿದೆ.

2. ಈಶ್ವರನಿಗೆ ಪಕ್ಷಪಾತವೂ ನಿರ್ದಯತೆಯೂ ಇರುವುದಿಲ್ಲ. ಏಕೆಂದರೆ ಅವರವರ ಪಾಪ–ಪುಣ್ಯಗಳನ್ನು ಅಪೇಕ್ಷಿಸಿಯೇ (ನಿಮಿತ್ತ ಮಾಡಿಕೊಂಡೇ) ಕೆಲವು ಪ್ರಾಣಿಗಳನ್ನು ಸುಖಿಗಳನ್ನಾಗಿಯೂ ಇನ್ನು ಕೆಲವನ್ನು ದುಃಖಿಗಳನ್ನಾಗಿಯೂ ಮತ್ತೆ ಕೆಲವನ್ನು ಸುಖದುಃಖಭಾಗಿಗಳನ್ನಾಗಿಯೂ ಸೃಷ್ಟಿಸುವನು. ಹೀಗೆಯೇ ಶ್ರುತಿಯೂ (ಕೌ.ಬ್ರಾ.3.8) ಇದೆ.

3. ಪ್ರಳಯದಲ್ಲಿ ಎಲ್ಲವೂ ಲಯವಾಗುವುದರಿಂದ ಬೀಜಭೂತವಾದ ಕರ್ಮವು ಇಲ್ಲವೆಂದಂತಾಗುವುದಿಲ್ಲವೇ? ಅದರಿಂದ ಸೃಷ್ಟಿಯಲ್ಲಿ ಸಂಕರವಾಗುವುದಿಲ್ಲವೇ ಎಂದರೆ ಇಲ್ಲ. ಸಂಸಾರವು ಪ್ರವಾಹದಂತೆ ಅವಿಚ್ಛಿನ್ನವಾಗಿರುವುದರಿಂದ ಈ ಶಂಕೆಗೆ ಅವಕಾಶವಿಲ್ಲ.

ಅನಾದಿಯಾದರೆ ಅದಕ್ಕೆ ಆಶ್ರಯನಾದ ಸಂಸಾರಿಯು ಅನಾದಿಯಾಗಿರುವುದು ಕೈಮುತಿಕನ್ಯಾಯ[1]ದಿಂದ ಸಿದ್ಧವಾಗುತ್ತದೆ. ಆದ್ದರಿಂದ ಆತ್ಮನಿಗೆ ಶರೀರಭೇದವು ಸಿದ್ಧವಾಯಿತು. ಶರೀರಕ್ಕಿಂತ ಬೇರೆಯಾದ ಆತ್ಮನ ಅಸ್ತಿತ್ವವನ್ನು ಹೇಳುವವನೇ ಆಸ್ತಿಕನೆಂದೂ(ಸಿದ್ಧವಾಯಿತು). ಶಾಸ್ತ್ರವ್ಯವಹಾರಕ್ಕೆ ಆದಿಕಾರಣವು ಆಸ್ತಿಕತೆಯೆಂದು, ಪ್ರಾಣಿಗಳಿಗೆ ನರಜನ್ಮ ದುರ್ಲಭ, ಎಂಬುದರಿಂದ ಸೂಚಿಸಲ್ಪಟ್ಟಿದೆ.

ಮನುಷ್ಯಜನ್ಮಕ್ಕಿಂತ ಪುರುಷಜನ್ಮವು (ದುರ್ಲಭ). ಏಕೆಂದರೆ ಸ್ತ್ರೀಯರಿಗೆ ವೇದಾಧ್ಯಯನದಲ್ಲಿ ಅಧಿಕಾರವಿಲ್ಲ. ಉಪನಿಷತ್ತಿನಿಂದ[2] ಮಾತ್ರ ತಿಳಿಯಲು ಯೋಗ್ಯನಾದ ಆತ್ಮನು (ಸ್ತ್ರೀಯರಿಂದ) ತಿಳಿಯಲು ಸಾಧ್ಯವಿಲ್ಲ ಎಂದು ಅಭಿಪ್ರಾಯ. ಅದರಲ್ಲಿಯೂ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ವೇದಾಧಿಕಾರವಿದ್ದರೂ ಕ್ಷತ್ರಿಯ ವೈಶ್ಯರಿಗೆ ರಾಜ್ಯಪಾಲನೆ, ಕೃಷಿ ಮುಂತಾದ ಚಿತ್ತಚಾಂಚಲ್ಯಕ್ಕೆ ಕಾರಣವಾಗುವ ಹೊರಗಿನ ಕಾರ್ಯಗಳು ಇರುವುದರಿಂದ ತತ್ಪರತೆಯಿಂದ ಆತ್ಮವಿಚಾರವು ಕಷ್ಟಸಾಧ್ಯವಾಗುವುದೆಂದು, ವೈಷ್ಣವ[3] (ಪರಮಾತ್ಮನಿಗೆ ಸಂಬಂಧಿಸಿದ) ಚಿಹ್ನೆಯನ್ನು ಧರಿಸುವುದೆಂಬುದಿದು (ವಿರಾಟ್ ಪುರುಷನ ಮುಖದಿಂದ ಜನಿಸಿದ) ಬ್ರಾಹ್ಮಣರ ಧರ್ಮವಾಗಿರುತ್ತದೆ. (ತೋಳಿನಿಂದ ಹಾಗೂ ತೊಡೆಯಿಂದ ಜನಿಸಿದ) ಕ್ಷತ್ರಿಯ, ವೈಶ್ಯರಿಗೆ ಇದು ಧರ್ಮವೆಂದು ವಿಹಿತವಾಗಿರುವುದಿಲ್ಲ ಎಂಬ ಸ್ಮೃತಿಯನ್ನನುಸರಿಸಿ ತತ್ಪರತೆಯಿಂದ ಬ್ರಹ್ಮವಿಚಾರಕ್ಕೆ ಸಾಧನವಾದ ಸಂನ್ಯಾಸಕ್ಕೆ (ಕ್ಷತ್ರಿಯ, ವೈಶ್ಯರಿಗೆ) ಅವಕಾಶವಿಲ್ಲದಿರುವುದರಿಂದ ಒಂದೇ ಜನ್ಮದಲ್ಲಿ ಬ್ರಹ್ಮಜ್ಞಾನವು ಅವರಿಗೆ ಲಭಿಸುವುದು ಕಷ್ಟವೆಂದು ಸೂಚಿಸಲು, ಅದಕ್ಕಿಂತ ದ್ವಿಜತ್ವ ಎಂದು ಹೇಳದೆ, ಅದಕ್ಕಿಂತ ವಿಪ್ರನಾಗಿರುವುದು, ಎಂದು ಹೇಳಿದ್ದಾರೆ.

ಬ್ರಾಹ್ಮಣನ ಈ ದೇಹವು ಉಪಭೋಗಿಸುವುದಕ್ಕಾಗಿ ಇರುವುದಿಲ್ಲ. ಇಲ್ಲಿ, ಜೀವಿಸಿರುವಾಗ, ಮಹತ್ತಾದ ಕ್ಲೇಶಕ್ಕಾಗಿಯೂ, ಸತ್ತಮೇಲೆ ಕೊನೆಯಿಲ್ಲದ ಸುಖಕ್ಕಾಗಿಯೂ (ಅದು) ಸಮರ್ಥವಾಗುತ್ತದೆ ಎಂಬ ವಸಿಷ್ಠ ಸ್ಮೃತಿಯಿಂದ ವೇದವಿಹಿತವಾದ ಪ್ರವೃತ್ತಿ[4]–ನಿವೃತ್ತಿ[5] ಧರ್ಮಗಳನ್ನು ಆಚರಿಸುವುದರಿಂದ ಒಂದೇ ಜನ್ಮದಲ್ಲಿ ಬ್ರಹ್ಮವಸ್ತುವನ್ನು ತಿಳಿಯಲು ಬ್ರಾಹ್ಮಣನಿಗೆ ಸಾಧ್ಯವೆಂದು ಅಭಿಪ್ರಾಯ. ಆದ್ದರಿಂದಲೇ, ಅದಕ್ಕಿಂತ ವೈದಿಕ ಧರ್ಮದ ಮಾರ್ಗದಲ್ಲಿರುವುದು, ಎಂದು ಹೇಳಿದೆ. ಬ್ರಾಹ್ಮಣನಾದ ಮಾತ್ರಕ್ಕೆ ಪಡೆಯಬೇಕಾದುದನ್ನು ಪಡೆಯುವುದಿಲ್ಲ. ಆದರೆ ಬ್ರಾಹ್ಮಣಜನ್ಮವನ್ನು ಹೊಂದಿ ಅದಕ್ಕೆ ಯೋಗ್ಯವಾದ ಧರ್ಮಾನುಷ್ಠಾನದಿಂದ ಎಂದು ತಾತ್ಪರ್ಯ. ಧರ್ಮವು ಸಮಸ್ತ ಜಗತ್ತಿಗೆ ಆಧಾರ, ಧರ್ಮದಿಂದ ಪಾಪವನ್ನು ನಿವಾರಿಸುತ್ತಾನೆ (ಮ.ನಾ.17.6) ಎಂಬ ಶ್ರುತಿಯಿಂದ ಧರ್ಮವೇ ಸುಖಕ್ಕೆ ಸಾಧನವೂ, ದುಃಖಕ್ಕೆ ಕಾರಣವಾದ ಪಾಪದ ನಿವಾರಕವೂ, ಆ ಪಾಪದ ನಿವಾರಣೆಯಿಂದ ಮುಂದೆ ದುಃಖವು ಬಾರದೆ ಇರುವುದಕ್ಕೆ ಕಾರಣವೂ ಆಗಿರುವುದರಿಂದ, ಸುಖವು ನನಗೆ ಉಂಟಾಗಲಿ, ದುಃಖವು ನನಗೆ ಉಂಟಾಗದಿರಲಿ ಎಂಬುದಾಗಿ ಸಕಲ ಜನರ ಅಪೇಕ್ಷೆಗೆ ವಿಷಯವಾದ ಸುಖ ಮತ್ತು ದುಃಖಾಭಾವ ಎಂಬ ಪುರುಷಾರ್ಥಗಳಿಗೆ ಸಾಧನವಾಗಿರುವುದು ಅದೇ (ಧರ್ಮವೇ) ಎಂದು ತೋರಿಸಲು, ಧರತೀತಿ ಧರ್ಮಃ ಧ್ರಿಯತೇಽನೇನೇತಿ ವಾ ಧರ್ಮಃ ಎಂಬ ವ್ಯುತ್ಪತ್ತಿಯಿಂದ ಅದು ಜಗತ್ತಿನ

---

1. ಚಕ್ಕುಲಿಯನ್ನು ಪೋಣಿಸಿದ ಕೋಲನ್ನೇ ಇಲಿಯು ನುಂಗಿತೆಂದು ಹೇಳಿದ ಮೇಲೆ ಮತ್ತೆ ಅದರಲ್ಲಿಯ ಚಕ್ಕುಲಿಯನ್ನು ತಿಂದಿತೆಂದು ಪ್ರತ್ಯೇಕವಾಗಿ ಹೇಳದಿದ್ದರೂ ಅದನ್ನು ಹೇಳಿದಹಾಗೇ ಆಗುವುದು. ಈ ಉದಾಹರಣೆಯೇ **ಕೈಮುತಿಕನ್ಯಾಯ**.

2. 'ತತ್ತ್ವೌಪನಿಷದಂ ಪುರುಷಂ ಪೃಚ್ಛಾಮಿ' ಎಂಬ ಶ್ರುತಿಯು ಉಪನಿಷತ್ತಿನಿಂದಲೇ ಆತ್ಮನು ಗಮ್ಯನೆಂದು ಹೇಳುವುದು, ಸಂಸಾರವು ಅನಾದಿಯೆಂಬುದು ಸರಿಯಾಗುವುದು. ಅನಾದಿಯೆಂದೇ ಶ್ರುತಿ (ಛಾಂ.ಉ.6.3.2)ಯಲ್ಲಿ ಸ್ಪಷ್ಟವಾಗಿ ಹೇಳಿದೆ.

3. ವೈಷ್ಣವಚಿಹ್ನಧಾರಣೆಯೆಂದರೆ ಸಂನ್ಯಾಸಾಶ್ರಮಸ್ವೀಕಾರ. ಇದು ಬ್ರಾಹ್ಮಣರ ಧರ್ಮ, ಕ್ಷತ್ರಿಯ ಮತ್ತು ವೈಶ್ಯರಿಗೆ ಇದನ್ನು ಧರ್ಮವೆಂದು ಹೇಳಿಲ್ಲ.

4. ಪ್ರವೃತ್ತಿಧರ್ಮವೆಂದರೆ ಸಂಧ್ಯೋಪಾಸನೆ, ಅಗ್ನಿಹೋತ್ರ ಮುಂತಾದವು.

5. ನಿವೃತ್ತಿಧರ್ಮವೆಂದರೆ ಜ್ಞಾನ, ವೈರಾಗ್ಯ, ಯಮ, ನಿಯಮ ಮುಂತಾದವು.